ಇ) ಹಾಗಿದ್ದಲ್ಲಿ ರೂಪಿಸುವ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಸಿ. ಬೈರೇಗೌಡ (ಕೃಷಿ ಸಚಿವರು):

ಅ) ನೈಸರ್ಗಿಕ ವಿಕೋಪಗಳಿಂದ ಬೆಳೆಗಳು ನಾಶವಾಗುವುದಕ್ಕೆ ಪರಿಹಾರ ನೀಡುವುದಕ್ಕಾಗಿ ಪ್ರತ್ಯೇಕವಾದ ಬೆಳೆ ವಿಮಾ ಯೋಜನೆ ಜಾರಿಯಲ್ಲಿರುವ ಸಮಗ್ರ ಬೆಳೆ ವಿಮಾ ಯೋಜನೆಯಲ್ಲಿ ಸಹಕಾರ ಸಂಘ ಮತ್ತು ಬ್ಯಾಂಕುಗಳಿಂದ ಸಾಲ ಪಡೆದ ರೈತರಿಗೆ ಮಾತ್ರ ನೀಡಲಾಗುತ್ತಿದೆ.

ಆ) ಉದ್ಭವಿಸುವುದಿಲ್ಲ.

ಇ) ಒಣಭೂಮಿ ಪ್ರದೇಶದಲ್ಲಿ ಬೆಳೆವಿಮಾ ಯೋಜನೆಯನ್ನು ಜಾರಿಗೊಳಿಸುವ ಬಗ್ಗೆ ಪರಿಶೀಲಿಸುವ ಸಲುವಾಗಿ ಹಣಕಾಸು ಮತ್ತು ಯೋಜನಾ ಸಚಿವರ ಅಧ್ಯಕ್ಷತೆಯಲ್ಲಿ ಸಚಿವ ಸಂಪುಟ ಉಪಸಮಿತಿಯೊಂದನ್ನು ರಚಿಸಲಾಗಿದೆ.

ಆರಾಧನಾ ಯೋಜನೆಯಲ್ಲಿ ಬಿಡುಗಡೆಯಾದ ಹಣ

280 - ಶ್ರೀ ಯು.ಬಿ. ಬಣಕಾರ (ಹಿರೇಕರೂರು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ತಾಲ್ಲೂಕುವಾರು ನಿಗಧಿಮಾಡಿದ ಹಣವೆಷ್ಟು? ಬಿಡುಗಡೆಯಾದ ಹಣವೆಷ್ಟು? ಖರ್ಚಾದ ಹಣವೆಷ್ಟು?

ಆ) 1995-96ನೇ ಸಾಲಿನಲ್ಲಿ ಆರಾಧನಾ ಯೋಜನೆ ಅಡಿಯಲ್ಲಿ ತಾಲ್ಲೂಕುವಾರು ನಿಗಧಿ ಮಾಡಿದ ಹಣವೆಷ್ಟು?

ಇ) ದಿನಾಂಕ: 30-6-95 ರೊಳಗೆ ಬಿಡುಗಡೆಯಾದ ಹಣವೆಷ್ಟು? ತಾಲ್ಲೂಕುವಾರು ಹಾಗೂ ಖರ್ಚಾದ ಹಣವೆಷ್ಟು?

ಶ್ರೀ ಆರ್.ಎಲ್.ಜಾಲಪ್ಪ (ಕಂದಾಯ ಸಚಿವರು):

ಅ) 1994-95ನೇ ಸಾಲಿನಲ್ಲಿ ಒಟ್ಟು ರೂ. 6.71 ಕೋಟಿಗಳನ್ನು ಮಂಜೂರು ಮಾಡಿದ್ದು, ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ. (ಅನುಬಂಧ-1ರಲ್ಲಿ ವಿವರ ನೀಡಿದೆ) ಸಮಿತಿಗಳು ಅಸ್ತಿತ್ವದಲ್ಲಿ ಇಲ್ಲದ್ದರಿಂದ ಹಣ ಖರ್ಚಾಗಿರುವುದಿಲ್ಲ.

ಆ) 1995-96ನೇ ಸಾಲಿನ ಆಯವ್ಯಯದಲ್ಲಿ ರೂ. 5.00 ಕೋಟಿ ಒದಗಿಸಲಾಗಿದೆ. ಆರ್ಥಿಕ ಇಲಾಖೆಯ ಸಹಮತಿ ಪಡೆದು ಈ ಬಗ್ಗೆ ಆದೇಶ ಹೊರಡಿಸಲಾಗುವುದು.

ಇ) ಉದ್ಭವಿಸುವುದಿಲ್ಲ.

ಅನುಬಂಧ - 1

1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಜಿಲ್ಲಾವಾರು ಸರ್ಕಾರದಿಂದ ಮಂಜೂರಾದ ಅನುದಾನ ವಿವರ

ಕ್ರ ಸಂ.	ಜಿಲ್ಲೆ	ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಿದ ಒಟ್ಟು ಮೊತ್ತ
1)	ಬೆಂಗಳೂರು (ಗ್ರಾಮಂತರ)	38,56,787-00
2)	ಬೆಂಗಳೂರು ನಗರ	79,20,148-00
3)	ಬೆಳಗಾಂ	46,78,216-00
4)	ಬಿಜಾಪುರ	39,20,180-00
5)	ಬೀದರ್	16,46,072-00
6)	ಬಳ್ಳಾರಿ	24,04,118-00
7)	ಚಿಕ್ಕಮಗಳೂರು	16,46,072-00
8)	ಚಿತ್ರದುರ್ಗ	29,09,465-00
9)	ದಕ್ಷಿಣ ಕನ್ನಡ	49,20,180-00
10)	ಧಾರವಾಡ	46,78,216-00
11)	ಗುಲ್ಬರ್ಗಾ	34,14,823-00
12)	ಹಾಸನ	21,51,429-00
13)	ಕೋಲಾರ	35,62,144-00
14)	ಕೊಡಗು	8,88,036-00
15)	ಮಂಡ್ಯ	24,04,108-00
16)	ಮೈಸೂರು	37,72,859-00
17)	ರಾಯಚೂರು	29,09,465-00
18)	ಶಿವಮೊಗ್ಗ	26,56,787-00
19)	ತುಮಕೂರು	51,14,823-00
20)	ಉತ್ತರ ಕನ್ನಡ	16,46,072-00
		6,71,00,000-00